

# ಮುಖದ ಅಂದಕ್ಕೆ ಬೊಟಾಕ್ಸ್

ಮುಖಕ್ಕೆ ವಯಸ್ಸಾಗುವುದನ್ನು ತಡೆಯುವ ಪ್ರಸಾಧನಗಳದು ಒಂದು ಮಾರುಕಟ್ಟೆಯಾದರೆ, ವಯಸ್ಸಾದ ಮುಖವನ್ನು ತಾರುಣ್ಯಕ್ಕೆ ತಿರುಗಿಸುವ ಇನ್ನೊಂದು ಮಾರುಕಟ್ಟೆಯಿದೆ.

■ ಡಾ.ಪ್ರೇಮಲತ ಬಿ.

ಕೂದಲು ಬೆಳ್ಳಗಾದರೆ ಕಪ್ಪು ಬಣ್ಣ ಬಳಿದುಕೊಳ್ಳಬಹುದು. ಸೊಂಟದ ಸುತ್ತ ಬೊಜ್ಜು ಬೆಳೆದರೆ, ಚರ್ಮ ಜೋತು ಬಿದ್ದರೆ, ಬಿಗಿಯಾದ ಉಡುಪುಗಳನ್ನು ಧರಿಸಿ ಅಡಗಿಸಿಡಬಹುದು. ಆದರೆ, ಕಣ್ಣ ಸುತ್ತ ನಿರಿಗೆ ಮೂಡಿದರೆ, ಮುಖ ಸಿಂಡರಿಸದಿದ್ದರೂ ಹಣೆಯಲ್ಲಿ ನಿರಿಗೆಗಳು ಮೂಡ ಹತ್ತಿದರೆ, ಬಾಯಿಯ ಸುತ್ತ ಸಣ್ಣ ಸುಕ್ಕುಗಳು ಮೂಡಿ, ಚರ್ಮ ಇಳಿ ಬಿದ್ದರೆ ಹೇಗೆ ಮುಚ್ಚಿಡುವುದು?

ವಯಸ್ಸಾಗುವುದರ ಲಕ್ಷಣಗಳು ಮೊದಲು ಕಾಣಿಸುವುದು ಬಹುತೇಕ ಮುಖದಲ್ಲಿ! ಮನಸ್ಸಿನ ಭಾವಗಳಿಗೆ ಮುಖವೇ ಕನ್ನಡಿ ಎನ್ನುತ್ತಾರೆ. ಹಾಗೆಯೇ ವಯಸ್ಸಿಗೂ ಮುಖವೇ ಜಾಹೀರಾತು ಫಲಕವಾಗಿ ಬಿಡುತ್ತದೆ!

ಈಗಿನ ಕಾಲದ ಮಹಿಳೆಯರು ಕೆಲಸಕ್ಕೂ ಹೋಗಬೇಕು, ಮಕ್ಕಳನ್ನೂ ಹೆರಬೇಕು, ಮನೆಯನ್ನೂ ಸಂಭಾಳಿಸಬೇಕು. ತಣ್ಣಗೆ ಮನೆಯಲ್ಲಿ ಕೂತು ಹೊರಗಿನ ಗಾಳಿ, ಧೂಳು, ಮಳೆ, ಬಿರು ಬಿಸಿಲನ್ನು ದೂರವಿಡುವಂತಿಲ್ಲ. ಕೆಲಸದಲ್ಲಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಹಿಳೆಯು ಅಂದ, ಚಂದದ ಜೊತೆಗೆ ಕರ್ತವ್ಯಗಳಿಗೂ ಬಾಧ್ಯಳಾಗಬೇಕು. ಅರವತ್ತು ವರ್ಷ ದಾಟಿದ ಮೇಲೆ ವಯಸ್ಸಿನ ಅರಿವು ಮನಸ್ಸಿಗೂ, ದೇಹಕ್ಕೂ ಒಟ್ಟಿಗೇ ಉಂಟಾಗುತ್ತದೆ. ಬದುಕು ಒಂದು ಸಮಾಧಾನಕ್ಕೆ ಬಂದಿರುತ್ತದೆ. ಆದರೆ ಮನಸ್ಸಿಗೆ ವಯಸ್ಸಾಗುವ ಮುನ್ನವೇ ದೇಹಕ್ಕೆ ವಯಸ್ಸಾಗುವ ಸಹಜ ಕ್ರಿಯೆ ನಡೆಯುವುದರಿಂದ ಮುಖದಲ್ಲಾದರೂ ಅದನ್ನು ಮುಚ್ಚಿಡುವ, ತಡೆಯುವ ವೈಜ್ಞಾನಿಕ ಚಿಕಿತ್ಸೆಗಳಿಗೆ ಇನ್ನಿಲ್ಲದ ಬೇಡಿಕೆ ಹುಟ್ಟಿದೆ!

16–17 ವರ್ಷದ ಬಾಲೆಯರು ಬಂದು ಮುಖ ಗಂಟಿಕ್ಕಿದಾಗ ಉಂಟಾಗುವ ಸುಕ್ಕುಗಳನ್ನು ತೋರಿಸಿ 'ಬೊಟಾಕ್ಸ್' ಬೇಡುವುದನ್ನು ನೋಡಲು ಖೇದವಾಗುತ್ತದೆ. ಬೇಕಾದಷ್ಟು ಪುರುಷರು ಕೂಡ ಮುಖದ ನಿರಿಗೆಗಳನ್ನು ಬೊಟಾಕ್ಸ್ ಮೂಲಕ ಕಡಿಮೆ ಮಾಡಿಕೊಳ್ಳುವುದು ಸಹಜವಾಗಿಬಿಟ್ಟಿದೆ. ನಾನು ಸಹಜವಾಗಿ ವಯಸ್ಸಾಗುವುದನ್ನು ಇಷ್ಟಪಡುತ್ತೇನೆ ಎನ್ನುವವರು ಬೆರಳೆಣಿಕೆಯಷ್ಟು ಕಡಿಮೆಯಾಗುತ್ತಿದ್ದಾರೆ.

ಮುಖಕ್ಕೆ ವಯಸ್ಸಾಗುವುದನ್ನು ತಡೆಯುವ ಪ್ರಸಾಧನಗಳದು ಒಂದು ಮಾರುಕಟ್ಟೆಯಾದರೆ, ವಯಸ್ಸಾದ ಮುಖವನ್ನು ತಾರುಣ್ಯಕ್ಕೆ ತಿರುಗಿಸುವ ಇನ್ನೊಂದು ಮಾರುಕಟ್ಟೆಯಿದೆ. ಎರಡನೆಯ ಮಾರುಕಟ್ಟೆಯಲ್ಲಿ ಮೂರು ವಿಧಗಳಿವೆ.

ಈಗಾಗಲೇ ಸುಕ್ಕುಗಟ್ಟುತ್ತಿರುವ ಚರ್ಮವನ್ನು ಮತ್ತೆ ಬಿಗಿ ಮಾಡುವ ಮುಖದ ಕ್ರೀಮು, ಬಾಮು, ಪ್ರಸಾಧನಗಳು ಒಂದು ಬಗೆಯವು. ಇವುಗಳಲ್ಲಿ ಒಂದು ಸಣ್ಣ ಟ್ಯೂಬ್ ಅಥವಾ ಕುಡಿಕೆಯ ಬೆಲೆಗೆ ಅಪಾರವಾದ ವ್ಯತ್ಯಾಸಗಳಿವೆ. ಇವು ಮುಖದ ವಯಸ್ಸನ್ನು ತಡೆಯುವ ಮಾರುಕಟ್ಟೆಯ ನಾಯಕತ್ವ ವಹಿಸಿವೆ.

ಎರಡನೇ ಸ್ಥಾನದಲ್ಲಿರುವುದು, ಮುಖದ ಜೈವಿಕ ಕ್ರಿಯೆಯನ್ನು ತಾತ್ಕಾಲಿಕವಾಗಿಯಾದರೂ ತಿರುವು ಮುರುವು ಮಾಡುವ ಬೊಟಾಕ್ಸ್, ಫಿಲ್ಲರ್‌ಗಳು ಮತ್ತು ಇತರೆ ಚಿಕಿತ್ಸೆಗಳು! ಮೂರನೆಯದು, ಶಸ್ತ್ರಚಿಕಿತ್ಸೆಗಳ ಮತ್ತೊಂದು ದೊಡ್ಡ ಲೋಕ!

## ಮುಖಕ್ಕೆ ಹೇಗೆ ವಯಸ್ಸಾಗುತ್ತದೆ?

ಮುಖಕ್ಕೆ ವಯಸ್ಸಾಗುವುದನ್ನು ಕಾಣುವುದು ಮೇಲ್ಮೈ ಚರ್ಮದಲ್ಲಾದರೂ, ಒಳಗಿನ ಕೊಬ್ಬು, ಮಜ್ಜೆ ಮತ್ತು ಮೂಳೆಗಳಲ್ಲಿ ಕೂಡ ವಯಸ್ಸಿನ ಪರಿಣಾಮಗಳಾಗಿರುತ್ತವೆ. ಒಟ್ಟಾರೆ ಬದಲಾವಣೆಯನ್ನು ನಾವು ಚರ್ಮದಲ್ಲಿ ನೋಡುತ್ತೇವೆ ಅಷ್ಟೇ! ವಯಸ್ಸಾಗುವಿಕೆಯ ಒಂದು ರೀತಿ ಅಂದರೆ, ಬೇಕಾದ ಕಡೆ ಕೊಬ್ಬನ್ನು ಕಳೆದುಕೊಂಡು ಬೇಡವಾದ ಕಡೆ ಗಳಿಸುವುದು!

ಈ ಕಾರಣ ಮುಖದ ಚರ್ಮಕ್ಕೆ ಬೇಕಾದ ಆಧಾರ ಕುಸಿಯುತ್ತದೆ. ನಮ್ಮ ಭಾವನೆಗಳನ್ನು ತೋರಿಸುವ ಸ್ನಾಯುಗಳು ಚರ್ಮದ ಮೂಲಕ ದೊಡ್ಡ ರೇಖೆಗಳಾಗಿ ಮೂಡುತ್ತವೆ. ಇವನ್ನು ಬೊಟಾಕ್ಸ್ ಮೂಲಕ ಸುಧಾರಿಸಬಹುದು. ಇನ್ನೂ ವಯಸ್ಸಾದಲ್ಲಿ ಸ್ನಾಯುಗಳನ್ನು ಚಲಿಸದಿದ್ದರೂ ಈ ರೇಖೆಗಳು ಶಾಶ್ವತವಾಗಿ ಉಳಿಯುತ್ತವೆ. ಇದು ಚರ್ಮದ ಕೆಳಗಿನ ಕೊಬ್ಬು ಮತ್ತು ಮಜ್ಜೆಯ ಕರಗುವಿಕೆಯಿಂದ ಉಂಟಾಗುವ ಕಾರಣ, ಚರ್ಮಕ್ಕೆ ಫಿಲ್ಲರ್‌ಗಳ ಆಧಾರ ಒದಗಿಸಿ

